© 2020 IJNRD | Volume 5, Issue 6 June 2020 | ISSN: 2456-4184

# ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ

**ಡಾ. ಮಹಾದೇವಿ ಆರ್. ಹಿರೇಮಠ**

ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

Email: drmrhiremathh@gmail.com

ಪ್ರಖರವಾದ ವೈಚಾರಿಕ ಮತ್ತು ಮಾನವೀಯ ಮೌಲ್ಯಗಳ ದೃಷ್ಟಿಯಿಂದ ಯಾರು ಎಂದಿಗೂ ಅಳಿಸಲಾಗದ ಚಿರಸ್ಥಾಯಿಯಾಗಬಲ್ಲ ಜಾಗತಿಕ, ಸಾಹಿತ್ಯಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಚಿನ್ನದ ರೇಖೆಯನ್ನು ಒಡಮೂಡಿಸಿದ್ದು ಶರಣ ಸಂಸ್ಕೃತಿ. ಕರ್ನಾಟಕದಲ್ಲಿ ಸಾಹಿತಿಕ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ೧೨ನೇ ಶತಮಾನದ ಚಿನ್ನದ ಯುಗ ಮಾನವತಿಯನ್ನು ಅರಿವು ಸನ್ಮಾರ್ಗ ಸದಾಭಿಮಾನ ಸುಸಂಸ್ಕಾರ ವಿಚಾರಗಳ ವಿಚಾರಕ್ಕೆ ಆಯಾಮಗೊಳಿಸಿದ ಪರ್ವಕಾಲ. ಸಮಾಜದ ಧಾರ್ಮಿಕ ಪ್ರಜ್ಞಾಘಾತಡೆಯಲ್ಲಿ ಪ್ರಕ್ರಿಯೆಯಲ್ಲಿ ಬೇರುಬಿಟ್ಟ ಜಡತೆಯನ್ನು ಕೊಡವಿಸಿ ವಿವೇಕಯುತ ಅನುಭವ ಶೀಲ ನೆಲೆಯಲ್ಲಿ ರೂಪಿಸಿ ಜಾಗತಿಕ ಮಟ್ಟಕ್ಕೆ ಅರುಹಿತು ಶಿವ ಶರಣರ ಅಮೂಲ್ಯ ಸಾಧನೆ. ಧರ್ಮದ ಹೆಸರಿನಲ್ಲಿ ನೆಲೆಗೊಂಡಿದ್ದ ಕರ್ಮಠತನ ಢಾಂಬಿಕತೆ, ಅಂಧಶ್ರದ್ಧೆ, ಶೋಷಣೆ, ಲಿಂಗಧಾರಿತವಾದ ಅಸಮಾನತೆ ಹೆಣ್ಣಿನ ಬಗ್ಗೆ ಇರುವ ಕೀಳರಿಮೆ ಮುಂತಾದ ಅನಿಷ್ಟ ಸಂಪ್ರದಾಯಗಳ ವಿರುದ್ಧ ಅಮೂಲಾಗ್ರ ಹೋರಾಟ ನಡೆಸಿ ಅವುಗಳ ಬೇರನ್ನು ಸಡಿಲಿಸಿ ಅಲ್ಲಿ ಅನುಭಾವದ ಸಸಿಯನ್ನು ನೆಟ್ಟದ್ದು ಶರಣರ ಬದುಕಿನಲ್ಲಿ ಕೈಕೊಂಡ ಮಹತ್ಸಾಧನೆ.

ಪರಂಪರಾಗತ ಜಡ ವ್ಯವಸ್ಥೆಯ ಕನಿಷ್ಟತಮ ಅಂಗವಾಗಿದ್ದ ದಮನೀತ ದುರ್ಬಲ ಧ್ವನಿಯ ದಲಿತರು ಶೋಷಿತರು ಕೆಳವರ್ಗದವರು ಮೊದಲ ಬಾರಿಗೆ ವಾಸ್ತವಕ್ಕೆ ಸ್ಪಂದಿಸಿ ಸಾಹಿತ್ಯದ ಮುಖಾಂತರ ತಮ್ಮ ಮನದ ತುಡಿತವನ್ನು ಹೊರ ಹಾಕಿದ್ದು ಇದೇ ಸಂದರ್ಭದಲ್ಲಿ. ಸಮಾಜದ ಉನ್ನತ ವರ್ಗದ ಪಂಡಿತ ಮಂಡಳಿಯಲ್ಲಿ ಸಿಲುಕಿಕೊಂಡು ಬಲೆತು ಕೊಳೆತು ನಾರುತಿದ್ದ ಕನ್ನಡ ಸಾಹಿತ್ಯವು ಪಂಡಿತರ ಕಪಿಮುಷ್ಟಿಯಿಂದ ಪಾರಾಗಿ ಸಹಜವಾಗಿ ಉಸಿರಾಡಬೇಕಾದರೆ ಹನ್ನೆರಡನೇ ಶತಮಾನದ ಶರಣ ಚಳುವಳಿಯೇ ಆಗಬೇಕಾಗಿತ್ತು. ಇಂಥ ಆಧ್ಯಾತ್ಮಿಕ ವಾತಾವರಣ ಜನಸಾಮಾನ್ಯರ ನೋವು ನಲಿಗಳಿಗೆ ಸ್ಪಂದಿಸಿತು ಅವರ ನಾಲಿಗೆಗೆ ಚಾಲನೆಯನ್ನು ಒದಗಿಸಿತು. ವರ್ಗದ ಮೊದಲ ಹೊರಹೊಮ್ಮಿದ ಅನುಭವದ ನವನೀತ ವಚನ ಸುಧಿ ಎನಿಸಿತು. ಸಂಸ್ಕೃತಿಯು ರೂಢಿ ಜಡವಾದಾಗ ಸಂವೇದನೆ ಸವಕಳಿಗೊಂಡು ಮೊಂಡಾದಾಗ ಸ್ಥಾಪಿತ ಮೌಲ್ಯವೇ ಅಧಿಕಾರದ ಗದ್ದುಗೆಯಲ್ಲಿ ರಾಜ್ಯಭಾರ ಮಾಡುವಂತಾದಾಗ ಅದರ ವಿರುದ್ಧ ಖಂಡಿಸಿದ್ದು, ನ್ಯಾಯ, ಶೋಷಣೆ, ಅಸಮಾನತೆ, ಅನಾಚಾರ, ಅಂದ್ಯದ್ದಿಗಳ ವಿರುದ್ಧ ಕಿಡಿ ಕಾರಿದ್ದು ಸಾಂಪ್ರದಾಯಿಕ ನೈತಿಕತೆ ಹೆಸರಿನಲ್ಲಿ ಸುಳಿದ ಕೋಟಾತನವನ್ನು ವೈರಿಗಳದು ಅಂತೆಯೇ ಸಾರ್ವಕಾಲಿಕ ಮೌಲ್ಯದ ವಚನ ಸಾಹಿತ್ಯ ಕೊಟ್ಟದ್ದು ಗಮನಾರ್ಯ ಸಂಗತಿ.

ಬಸವ ಪರಿಸರ ನೀಡಿದ ಅಕ್ಷರ ಜ್ಞಾನದ ಬೆಳಕನ್ನು ದುಡಿಯುವ ವರ್ಗ ಪಡೆದುಕೊಂಡಿದ್ದೊಂದೇ ತಡ ಹೊಸ ಹೊಸ ಅನುಭವಗಳ ಬಾಗಿಲು ತೆರೆದು ಸಮುದಾಯದ ಒಟ್ಟು ಬದುಕಿಗೆ ಕ್ರಿಯಾತ್ಮಕತೆ ಚಲನಶೀಲ ಉಂಟಾಗಿ ಅದರ ಪರಿಣಾಮವಾಗಿ ಹೆಚ್ಚಾಗಿ ಮೇಲು ವರ್ಗಕ್ಕಿಂತ ಜನಸಾಮಾನ್ಯ ವರ್ಗದ ಮೇಲೆ ಕೇಂದ್ರೀಕರಿಸಲ್ಪಟ್ಟು ಶೋಷಿತ ವರ್ಗದ ಮಹಿಳೆಯರು ಸಹ ಸ್ವಾಭಿಮಾನ ಮಾನವೀಯ ಮೌಲ್ಯಗಳ ಚಿಂತನ ಮಂಥನ ನಡೆಸಿದರು. ಆದ್ದರಿಂದ ತಮ್ಮ ಬದುಕಿನ ದಿಕ್ಕನ್ನೇ ಬದಲಾಯಿಸಿಕೊಂಡರು. ಈ ರೀತಿ ಶರಣ ಸಂಸ್ಕಾರದಿಂದ ಬದುಕನ್ನು ಪರಿವರ್ತಿಸಿಕೊಂಡವರಲ್ಲಿ ಉರಿಲಿಂಗ ಪೆದ್ದಿ ಹಾಗೂ ಅವನ ಪತ್ನಿ ಕಾಳವ್ವೆ.

ಕರ್ನಾಟಕದ ಸಾಂಸ್ಕೃತಿಕ ಪರಂಪರೆಯಲ್ಲಿ ಹನ್ನೆರಡನೆಯ ಶತಮಾನದ ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಆಂದೋಲನಗಳು ಅದರೊಟ್ಟಿಗೆ, ಶರಣ– ಧರ್ಮ ನೀಡಿದ ಪುರುಷ–ಸ್ತ್ರೀ ಸಮಾನತೆ, ಸ್ವಾತಂತ್ರ್ಯಗಳು ಸಮಕಾಲಿನ ಜನಾಂಗದ ಮಹಿಳೆಯರ ಮೇಲೆ ಎಂತಹ ಪರಿಣಾಮ ಬೀರಿದವು ಎಂಬುದಕ್ಕೆ ವಚನಕಾರ್ತಿಯರ ವಚನಗಳಲ್ಲಿ ನಿರೂಪಿತವಾದ ವಿಚಾರಧಾರೆಗಳೇ ಸಾಕ್ಷಿಯಾಗಿ ನಿಲ್ಲುತ್ತವೆ. ಅಭಿವ್ಯಕ್ತಿ ಸ್ವಾತಂತ್ರ್ಯದಂತಹ ಅಪೂರ್ವ ಅವಕಾಶವನ್ನುಪಯೋಗಿಸಿಕೊಂಡು ಮುಗಿಲೆತ್ತರ ಬೆಳೆದು ನಿಂತವರಲ್ಲಿ ಕೆಳವರ್ಗದ ದಲಿತ ಮಹಿಳೆಯರೂ ಸೇರಿದ್ದಾರೆ.

ಅಂಥವರಲ್ಲಿ ಉರಿಲಿಂಗ ಪೆದ್ದಿಗಳ ಸತಿ ಕಾಳವ್ವೆಯೂ ಒಬ್ಬಳಾಗಿದ್ದಾಳೆ. ಇಂದಿನ ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಕಂದ್ಹಾರ ಗ್ರಾಮದ ಅಸ್ಪೃಶ್ಯ ಕುಲದ ದಂಪತಿಗಳಾದ ಕಾಳವ್ವೆ ಮತ್ತು ಪತಿ ಪೆದ್ದಣ್ಣ. ಹೊಟ್ಟೆಪಾಡಿಗೆ ಕಟ್ಟಿಗೆ ಮಾರಿ ಬದುಕುವುದು ಅವರ ಉದ್ಯೋಗ. ಬಡತನದ ದಳ್ಳುರಿಗೆ ಬೆಂದ ಪೆದ್ದಣ್ಣ ಒಮ್ಮೊಮ್ಮೆ ಕಳ್ಳತನಕ್ಕೆ ಇಳಿಯುತ್ತಿದ್ದುದುಂಟು. ಅದೇ ಊರಿನಲ್ಲಿ ಒಂದು ದೊಡ್ಡ ಮಠ. ಅದರ ಅಧಿಪತಿ ಉರಿಲಿಂಗದೇವರು ಉನ್ನತ ಮಟ್ಟದ ಸಾಧಕರು ಹಾಗೂ ಅನುಭಾವಿಗಳಾಗಿದ್ದು ಒಂದು ರಾತ್ರಿ ಅವರ ಮಠಕ್ಕೆ ಕಳ್ಳತನಕ್ಕೆ ಹೋದ ಗುರುಲಿಂಗ ಪೆದ್ದಿ ಬೆಳಕಿಂಡಿಯಲ್ಲಿ ಉರಿಲಿಂಗ ದೇವರ ಲಿಂಗ ಪೂಜೆಯನ್ನು ಕಂಡು ಪೆದ್ದಣ್ಣ ಅತ್ಯಂತ ಪ್ರಭಾವಿತನಾದ. ಪತಿ-ಪತ್ನಿಯರು ಅಂದೇ ಸಾತ್ವಿಕ ಜೀವನ ನಡೆಸುವ ಪ್ರತಿಜ್ಞೆ ಕೈಕೊಂಡರು. ಗುರುಭಕ್ತಿ, ಶಿವನಿಷ್ಠೆ, ಶ್ರದ್ಧೆಯ ಕೆಲಸದಿಂದ ಇಬ್ಬರೂ ಗುರುಗಳ ಒಲುಮೆಗೆ ಪಾತ್ರರಾದರು. ಅವರಿಂದ ಲಿಂಗದೀಕ್ಷೆ ಪಡೆದು ಶಿವಭಕ್ತರಾದರು. ಅವರ ಶಿಷ್ಯತ್ವದಲ್ಲಿ ಸಾಧನೆ ಮುಂದುವರಿಸಿದರು. ಪೆದ್ದಣ್ಣ ಉರಿಲಿಂಗಪೆದ್ದಿಯಾದನು; ಕಾಳವ್ವ ಉರಿಲಿಂಗಪೆದ್ದಿಗಳರಸನ ಆದರ್ಶ ಸತಿಯಾದಳು" ಕಾಳವ್ವ ಕ್ರಾಂತಿಕಾರಿ ಮಹಿಳೆ. ಆಕೆ ಸ್ತ್ರೀ ಉದ್ಧಾರ, ದಲಿತೋದ್ಧಾರದ ಕಹಳೆಯನ್ನೂದಿ ಸಾಮಾಜಿಕ ಜಾಗೃತಿಯನ್ನುಂಟು ಮಾಡಿದವಳು. ಅಂತೆಯೇ ಆಕೆ ಸಾಹಿತ್ಯ ಪ್ರೇಮಿ. ತನ್ನ ಬಾಳಿನ ಹಣತೆಯಲ್ಲಿ ಚಿಂತನಶೀಲ ಅಭಿವ್ಯಕ್ತಿಯ ಜ್ಯೋತಿಗಳನ್ನು ಹಚ್ಚಿಟ್ಟು, ಕತ್ತಲೆ ತುಂಬಿದ ಸಮಾಜದಲ್ಲಿ ಬೆಳಕು ಬೀರಿದವಳು.

ವಚನಕಾರ್ತಿ ಕಾಳವ್ವೆ ಭಾರತದಲ್ಲಿ ದಲಿತವರ್ಗದ ಅತ್ಯಂತ ಪ್ರಾಚೀನ ಬರಹಗಾರ್ತಿ, ಚಿಂತಕಿ. 'ಉರಿಲಿಂಗ ಪೆದ್ದಿಗಳರಸ' ಎಂಬ ಅಂಕಿತದಲ್ಲಿ ಆಕೆ ಬರೆದ ನೂರಾರು ವಚನಗಳಲ್ಲಿ ಸದ್ಯ ಹದಿಮೂರು ವಚನಗಳು ದೊರೆತಿದ್ದು, ಆ ಎಲ್ಲ ವಚನಗಳೂ ಗಂಭೀರ ಅಧ್ಯಯನಕ್ಕೆ ಯೋಗ್ಯವಾಗಿವೆ. ಆಕೆಯ ಎರಡು ವಚನಗಳಲ್ಲಿ 'ಅಣೋರಣಿಯಾನ್ ಮಹತೋ ಮಹಿಯಾನ್' ಎಂಬ ಹಾಗೂ 'ನಿಂದಯಾ ಶಿವಭಕ್ತಾನಾಂ ಕೋಟಿ ಜನ್ಮನಿ ಸೂಕರಃ ಸಪ್ತ ಜನ್ಮನಿ ಭವೇತ್ ಕುಷ್ಠಿ ದಾಸೀಗರ್ಭೇಷು, ಜಾಯತೇ' ಎಂಬ ಸಂಸ್ಕೃತ ಪ್ರಸಿದ್ಧ ಉಕ್ತಿಗಳನ್ನು ಗಮನಿಸಿದರೆ, ಅವಳು ಕನ್ನಡ ಭಾಷೆಯಲ್ಲಿ ವಿದ್ಯಾವಂತೆಯಾಗಿದ್ದುದಲ್ಲದೆ, ಗುರುವಿನ ಬೋಧೆ ಹಾಗೂ ಗಂಡನ ಮಾರ್ಗದರ್ಶನದಿಂದ ಸಂಸ್ಕೃತ ಜ್ಞಾನವನ್ನೂ ಪಡೆದಿದ್ದಳೆಂಬುದು ಅಚ್ಚರಿಯ ಸಂಗತಿಯಾಗುತ್ತದೆ. ದಲಿತ ವರ್ಗದಿಂದ ಭಕ್ತವರ್ಗಕ್ಕೆ ಪರಿವರ್ತನೆ ಹೊಂದಿ. ವ್ರತಸ್ಥ ದಾರಿಯಲ್ಲಿ ನಡೆದವಳು ಕಾಳವ್ವೆ. ಆದ್ದರಿಂದ ಆಕೆಯ ವಚನಗಳಲ್ಲಿ ಭಕ್ತನ ಲಕ್ಷಣ, ವ್ರತಾಚಾರದ ಮಹತ್ವ, ಕಾಯಕ ನಿಷ್ಠೆ, ಸ್ವಾವಲಂಬಿ ಬದುಕು-ಇವೇ ಮುಖ್ಯ ಆಶಯಗಳಾಗಿವೆ. ಅಂತಹ ಕೆಲವು ವಚನಗಳನ್ನು ಇಲ್ಲಿ ನೋಡಬಹುದು.

"ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ?
ಉಸಿದು ತಂದು ಮಾಡುವಾತ ಭಕ್ತನೆ?
ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ?
ನಿಂದಯಾ ಶಿವಭಕ್ತಾನಾಂ ಕೋತಿ ಜನ್ಮನಿ ಸೂಕರಃ
ಸಪ್ತಜನ್ಮನಿ ಭವೇತ್ ಕುಷ್ಠಿ ದಾಸೀಗರ್ಭಿಷು ಜಾಯತೇ
ಎಂದುದಾಗಿ, ತನ್ನ ಪ್ರಾಣದ ಮೇಲೆ ಬಂದಡೂ ಬರಲಿ, ಇವರ ಬಿಡಬೇಕು.
ಬಿಡದಿರಲು ಉರಿಲಿಂಗಪೆದ್ದಿಗಳರಸನೊಲ್ಲನವ್ವಾ"[೧]

"ತುಂಬರಗಿಡದ ಕೊಳ್ಳಿ ಸುರಸುರನೆ

ಸುಡುವುದು ಕಣ್ಣಿಗೆ ರಂಜನೆಯಷ್ಟೆ ಆದರೆ
ಅದು ತನ್ನ ಅಸ್ತಿತ್ವದ ನಿಗಿನಿಗಿಸಿ ಬೆಂಕಿ,
ಝಳ ಉಳಿಸಿಕೊಳ್ಳುವುದೇ ಇಲ್ಲ."[೨]

ಡಾಂಭಿಕ ಭಕ್ತನದೂ ಕೇವಲ ರಂಜನೆಯಷ್ಟೇ ಎಂಬ ವಿಡಂಬನೆ ಇಲ್ಲಿ ಇದೆ. ಭಕ್ತ ಸುಳ್ಳು ಹೇಳಿ, ಕದ್ದು ತಂದು ಗುರು-ಲಿಂಗ-ಜಂಗಮ ಭಕ್ತಿ ಮಾಡುವುದು ವಾಮಮಾರ್ಗ. ಇದು ಭಕ್ತರಿಗೆ ಸಲ್ಲದ ದಾರಿ ಸತ್ಪಥದಲ್ಲಿ ನಡೆಯಲಾರದವನು ಭಕ್ತನೆನ್ನಿಸಿಕೊಳ್ಳಲು ಅನರ್ಹನೆಂಬುದನ್ನು ಕಾಳವ್ವ ಸ್ಪಷ್ಟಪಡಿಸುತ್ತಾಳೆ. ಅದೇ ರೀತಿ ಭವಿಯಾದವನು

ಲಿಂಗ ಸಂಸ್ಕಾರ ಪಡೆದು ಭಕ್ತನಾದ ಬಳಿಕ, ಅವನ ಕುಲ-ಜಾತಿಯನ್ನೆತ್ತಿ (ಪೂರ್ವಾಶ್ರಮದ) ಟೀಕಿಸಬಾರದು. ಆದ್ದರಿಂದಲೇ ಬಸವಣ್ಣನವರು 'ಲಿಂಗವಂತನಾದ ಬಳಿಕ ಆವ ಕುಲವಾವುವೆಂದು ಬೆಸಗೊಂಡೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ' ಎಂದು ಭಾಷೆ ನುಡಿಯುತ್ತಾರೆ. ಹಾಗೆ ಹಂಗಿಸುವುದು ಭಕ್ತನಿಗೆ ಅವಮಾನ. ಈ ಅನುಭವ ಕಾಳವ್ವೆಗೂ ಆದಂತಿದೆ. ಆದ್ದರಿಂದ 'ಭಕ್ತರ ಕುಲವನ್ನೆತ್ತಿ ನಿಂದಿಸುವಾತ ಭಕ್ತನಲ್ಲ' ಎಂಬ ನಿಶ್ಚಿತ ಅರ್ಥವನ್ನು ಪ್ರಶ್ನೆಯ ಮೂಲಕ ಎತ್ತಿ ತೋರುತ್ತಾಳೆ. ದೃಷ್ಟಿಯಂತೆ ಸೃಷ್ಟಿ. ವಸ್ತು ಒಂದೇ ಆದರೂ ಅದನ್ನು ಕಾಣುವ ನೋಟ, ಅನುಭವಿಸುವ ಭಾವಗಳು ಬೇರೆಯಾಗಿರುತ್ತವೆ. ಈ ಅಂತರವನ್ನು ಕಾಳವ್ವೆ ತನ್ನೊಂದು ವಚನದಲ್ಲಿ ಬಹಳ ಸೊಗಸಾಗಿ ನಿರೂಪಿಸಿದ್ದಾಳೆ.

"ಭಾಗ್ಯವುಳ್ಳ ಪುರುಷಂಗೆ ಕಾಮಧೇನು,
ಕಾಮಿಸಿದುದನೀವುದಯ್ಯಾ
ನಿರ್ಭಾಗ್ಯ ಪುರುಷರಿಗೆ ಕಾಮಧೇನು
ತುಡುಗುಣಿಯಾಗಿ ತೋರುವುದಯ್ಯಾ
ಸತ್ಯಪುರುಷಂಗೆ ಕಲ್ಪವೃಕ್ಷ,
ಕಲ್ಪಿಸಿದುದನೀವುದಯ್ಯಾ
ಅಸತ್ಯಪುರುಷರಿಗೆ ಕಲ್ಪವೃಕ್ಷ,
ಬೊಬ್ಬುಳಿಯಾಗಿ ತೋರುವುದಯ್ಯಾ
ಧರ್ಮಪುರುಷರಿಗೆ ಚಿಂತಾಮಣಿ
ಚಿಂತಿಸಿದುದನೀವುದಯ್ಯಾ,
ಅಧರ್ಮಪುರುಷಂಗೆ ಚಿಂತಾಮಣಿ
ಗಾಜಿನಮಣಿಯಾಗಿ ತೋರುವದಯ್ಯಾ
ಶ್ರೀಗುರು ಕಾರುಣ್ಯವುಳ್ಳ ಸದ್ಭಕ್ತಂಗೆ
ಜಂಗಮಲಿಂಗವಾಗಿ ತೋರುವುದಯ್ಯಾ
ಭಕ್ತನಲ್ಲದ ಪಾಪಿಷ್ಯಂಗೆ ಜಂಗಮಲಿಂಗ
ಮಾನವನಾಗಿ ತೋರುವುದಯ್ಯಾ,
ಉರಿಲಿಂಗಪೆದ್ದಿಗಳರಸು ಒಲ್ಲನವ್ವಾ"[೩]

ಎನ್ನುವಲ್ಲಿ, ಸತ್ಯ, ಧರ್ಮ, ಸದ್ಭಕ್ತಿವುಳ್ಳ ಭಾಗ್ಯವಂತ ಪುರುಷನು ಕಂಡು ಅನುಭವಿಸುವ ಪರಮಾನಂದದ ಸ್ವರೂಪವನ್ನು ಕಾಳವ್ವೆ ಕೊಡುತ್ತಾಳೆ. ವ್ರತಾಚರಣೆಯ ಮಹತ್ವದ ಕುರಿತು ಕಳವ್ವೆ ತುಂಬಾ ಮಾರ್ಮಿಕವಾಗಿ ನುಡಿದಿದ್ದಾಳೆ. ವ್ರತ ಅಥವಾ ಶೀಲ ಎಂಬುದು ನಮ್ಮ ನಡೆ-ನುಡಿಗೆ ಸಂಬಂಧಿಸಿದ್ದುದು. ಕಾಳವ್ವೆ ವ್ರತಸ್ಥಳು. ವ್ರತದ ಬಗೆಗಿನ ಆಕೆಯ ಅಭಿಮಾನ, ಅನುಭವಗಳು ಅನಂತವಾಗಿವೆ. ಆಧ್ಯಾತ್ಮಿಕ ಸಿರಿತನದ ಆ ಅನುಭವಗಳನ್ನು ಕೆಲವು ಹೋಲಿಕೆಗಳ ಮೂಲಕ ಹಂಚಿಕೊಳ್ಳುತ್ತಾಳೆ.

ವ್ರತವೆಂಬುದು ನಾಯಕರತ್ನ,
ವ್ರತವೆಂಬುದು ಸುಪ್ಪಾಣಿಯ ಮುತ್ತು,
ವ್ರತವೆಂಬುದು ಜೀವನ ಕಳೆ
ವ್ರತವೆಂಬುದು ಸುಯಿದಾನ
ವ್ರತತಪ್ಪಲು ಉರಿಲಿಂಗಪೆದ್ದಿಗಳಸರನೊಲ್ಲನವ್ವಾ!"[೪]

ವ್ರತಕ್ಕೂ ಹಾಗೂ ಪರಮಾತ್ಮನಿಗೂ ಇರುವ ಸಂಬಂಧ ಅತ್ಯಂತ ನಿಕಟವಾದುದು. ನಿರಾಕಾರನಾದ ಪರಮಾತ್ಮನು ಸಾಕಾರರೂಪದ ಇಷ್ಟಲಿಂಗದಲ್ಲಿ ವಿರಾಜಿಸಿ, ವ್ರತಸ್ಥನ ನಡೆ-ನುಡಿಗಳನ್ನು ಗಮನಿಸುತ್ತಿರುತ್ತಾನೆ. ಆದ್ದರಿಂದಲೇ ವ್ರತಸ್ಥನು ಇಷ್ಟಲಿಂಗದ ಸಾಕ್ಷಿಯಾಗಿ ನಡೆದುಕೊಳ್ಳಬೇಕಾಗುತ್ತದೆ. ಈ ವಿಚಾರವು ಕಾಳವ್ವೆಯ ವಚನದಲ್ಲಿ ತಂಬಾ ಪರಿಣಾಮಕಾರಿಯಾಗಿ ಅಭಿವ್ಯಕ್ತವಾಗಿದೆ.

"ವ್ರತ ಹೋದಾಗಳೆ ಇಷ್ಟಲಿಂಗದ ಕಳೆ ನಷ್ಟವವ್ವಾ
ಅವರು ಲಿಂಗವಿದ್ದೂ ಭವಿಗಳು
ಅದು ಹೇಗೆಂದಡೆ; ಪ್ರಾಣವಿಲ್ಲದ ದೇಹದಂತೆ
ಉರಿಲಿಂಗಪೆದ್ದಿಗಳರಸ ಬಲ್ಲನೊಲ್ಲನವ್ವಾ"[೫]

ಬೇಡಿದ್ದನ್ನು ಕೊಡುವ ಇಷ್ಟಲಿಂಗವು ವ್ರತ ತಪ್ಪಿ ನಡೆದುಕೊಂಡಾಗ ಅದರ ಚೈತನ್ಯ, ಕಳೆಯೇ ಉಡುಗಿ ಹೋಗುತ್ತದೆ, ಪ್ರಾಣವಿಲ್ಲದ ದೇಹವಾಗುತ್ತದೆ ಎಂಬಲ್ಲಿ ಕಾಳವ್ವೆಯ ವ್ರತಸ್ಥ ಜೀವನ ಈ ಪರಾಕಾಷ್ಠೆಯ ಚಿತ್ರ ಕಣ್ಣಿಗೆ ಕಟ್ಟುತ್ತದೆ. ಸಾಮಾಜಿಕ ವರ್ಣಶ್ರೇಣಿಯಲ್ಲಿ ಉಚ್ಚವರ್ಗದವರೆನ್ನಿಸಿಕೊಳ್ಳುವವರ ನಡತೆಯ ಬಗೆಗೆ ಕಾಳವ್ವೆ ವ್ಯಕ್ತಪಡಿಸಿದ ಆಕ್ರೋಶ ಪ್ರಶ್ನೆಯ ರೂಪದಲ್ಲಿ ಹೊರಹೊಮ್ಮುತ್ತದೆ. ಅದೆಂದರೆ,

"ಕುರಿ ಕೋಳಿ ಕಿರಿಮೀನು ತಿಂಬವರಿಗೆಲ್ಲ
ಕುಲಜ ಕುಲಜರೆಂದೆಂಬರು,
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ
ಮಾದಿಗ ಕೀಳುಜಾತಿಯೆಂಬರು.
ಅವರೆಂತು ಕೀಳು ಜಾತಿಯಾದಾರು?
ಜಾತಿಗಳು ನೀವೇಕೆ ಕೀಳಾಗಿರೊ?
ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ
ನಾಯಿ ನೆಕ್ಕಿ ಹೋಯಿತು.
ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಗೆ
ಶೋಭಿತವಾಯಿತು.
ಅದೆಂತೆಂದಡೆ;
ಸಿದ್ದಲಿಕೆಯಾಯಿತು, ಸಗ್ಗಳೆಯಾಯಿತು.
ಸಿದ್ದಲಿಕೆಯ ತುಪ್ಪವನು, ಸಗ್ಗಳಿಯ ನೀರನು
ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರರಿಗೆ
ನಾಯಕ ನರಕ ತಪ್ಪದಯ್ಯಾ,
ಉರಿಲಿಂಗಪೆದ್ದಿಗಳರಸು ಒಲ್ಲನವ್ವ"[೬]

ಮೇಲ್ಜಾತಿಯವರು ಕುರಿ, ಕೋಳಿ, ಮೀನು ತಿಂದರೂ ಉತ್ತಮ ಕುಲದವರಾಗುತ್ತಾರೆ. ಸತ್ತ ಹಸು ತಿಂದ ಮಾತ್ರಕ್ಕೆ ಮಾದಿಗರು ಕೀಳು ಕುಲದವರಾಗುತ್ತಾರೆ. ಈ ತಾರತಮ್ಯವೇ ಭ್ರಾಂತಿಮೂಲವಾದುದು. ಬ್ರಾಹ್ಮಣ ತಿಂದು ಬಿಟ್ಟ ಪುಲ್ಲಿ (ಊಟದ ಎಲೆ) ನಾಯಿ ನೆಕ್ಕುತ್ತದೆ. ಅಲ್ಲಿಗೆ ಅದರ ಕಥೆ ಮುಗಿಯಿತು. ಮಾದಿಗರು ತಿಂದು ಬಿಟ್ಟ ಊಟದ ಎಲೆ (ಚರ್ಮ) ನಾಯಿ ಹಾಗೂ ಬ್ರಾಹ್ಮಣ ಇಬ್ಬರಿಗೂ ಪ್ರಿಯವಾಯಿತು. ಏಕೆಂದರೆ ಮಾದಿಗರು ತಿಂದು ಬಿಟ್ಟ ಹಸುವಿನ ಚರ್ಮದ ಎಲೆಯೇ ಸಿದ್ದಲಿಕೆ, ಸಗ್ಗಳೆ ಎಂಬ ಚೀಲಗಳಾಗಿ, ಅವುಗಳಲ್ಲಿ ತುಂಬಿದ ನೀರನ್ನು, ತುಪ್ಪವನ್ನು ಬ್ರಾಹ್ಮಣರು ಪವಿತ್ರವೆಂದು ಭಾವಿಸಿ ಕುಡಿಯುತ್ತಾರೆ. ಇದು ಬುದ್ಧಿಗೇಡಿ ಕೆಲಸಕ್ಕೆ ನರಕ ತಂದುಕೊಳ್ಳುವ ವಿಧಾನ ಎಂಬ ವಿಡಂಬನೆ ಕಾಳವ್ವೆಯದು. ಅಂತೆಯೇ ಆಕೃತ್ಯದಿಂದ ಉತ್ತಮ ಕುಲದವರು ಹೇಗಾಗುತ್ತಾರೆ? ಎಂಬ ದಿಟ್ಟತನದ ವಾದ ಆಕೆಯದು.

**ಕಾಯಕ ದಾಸೋಹ**

ಶಿವನ ಒಲುಮೆಗೆ ಕಾಯಕವೊಂದೇ ಸಾಧನ' ಎಂದು ನಂಬಿ, ಆಚರಿಸಿ ತೋರಿದವರು ಶರಣರು. ಕಾಳವ್ವೆಯು ಕಾಯಕದ ಬಗೆಗೆ ನೀಡಿದ ಸಲಹೆಗಳು ಅನುಕರಣೀಯವಾದವುಗಳು.

"ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯಶುದ್ಧವಿಲ್ಲದುದು ಕಾಯಕವಲ್ಲ"[೭]

ಎನ್ನುವಲ್ಲಿ, ಭಕ್ತನಿಗೂ–ಕಾಯಕಕ್ಕೂ ಇರುವ ಸಂಬಂಧ, ಕಾಯಕಕ್ಕಾಗಿ ಅದರ ಸತ್ಯಶುದ್ಧತೆಗೂ ಇರುವ ಸಂಬಂಧ ಅನನ್ಯವಾಗಿದೆ. ವ್ಯಕ್ತಿಯ ಕಾಯ(ಶರೀರ)ದ ಪರಿಶ್ರಮದಿಂದಲೇ 'ಕಾಯಕ' ವಾಗಬೇಕಾದಂಥದು. ಅಂದರೆ ತನ್ನ ಸ್ವಂತ ಪರಿಶ್ರಮದ ದುಡಿಮೆಯಿಂದಲೇ ತನ್ನ ಅನ್ನವನ್ನು ಗಳಿಸಿಕೊಳ್ಳುವುದಾಗಿದೆ. ಶರಣರ ಕಾಯಕ ಸಿದ್ಧಾಂತದಲ್ಲಿ ಬೇರೆಯವರು ಗಳಿಸಿದ್ದನ್ನು ತಿನ್ನುವುದು ದೊಡ್ಡ ಅಪರಾಧ! ಈ ಕುರಿತು ಕಾಳವ್ವೆಯ ಅಭಿಪ್ರಾಯವಂತೂ ಕಟ್ಟುಗ್ರವಾಗಿದೆ.

"ಉಂಡೊಡೆಯರಲ್ಲಿ ಕೊಂಬ ಪ್ರಸಾದ ಕಾರಿದಕೂಳು,
ಸಣ್ಣವರಲ್ಲಿ ಕೊಂಬ ಪ್ರಸಾದ ಸಂತೆಯ ಸೂಳೆಯ ಎಂಜಲು
ಅಳಿಯನಲ್ಲಿ ಕೊಂಬ ಪ್ರಸಾದ ಅಮೇಧ್ಯ
ಮಕ್ಕಳಲ್ಲಿ ಕೊಂಬ ಪ್ರಸಾದ ಗೋಮಾಂಸ,
ತಮ್ಮನಲ್ಲಿ ಕೊಂಬ ಪ್ರಸಾದ ಸಿಂಗಿ
ನಂಟರಲ್ಲಿ ಕೊಂಬ ಪ್ರಸಾದ ನರಮಾಂಸ,
ವಂದಿಸಿ ನಿಂದಿಸಿಕೊಂಬ ಪ್ರಸಾದವ,
ಉರಿಲಿಂಗಪೆದ್ದಿಗಳರಸನೊಲ್ಲನವ್ವಾ"[೮]

ಇಲ್ಲಿ, ಸ್ತ್ರೀಯಾಗಲಿ, ಪುರುಷನಾಗಲಿ ಯಾರು ಯಾರನ್ನೂ ಅವಲಂಬಿಸಕೂಡದು. ಬಂಧು–ನೆಂಟರ ನೆಪದಲ್ಲಿಯೇ ಆಗಲಿ, ಸ್ವಂತ ಮಕ್ಕಳನ್ನು ಆಶ್ರಯಿಸಿಯೇ ಆಗಲಿ ಬದುಕುವುದು ಶರಣ ಧರ್ಮದಲ್ಲಿ ನಿಷಿದ್ಧ. ಭಕ್ತನಾದವನು ದಿನನಿತ್ಯ ಕಾಯಕ ದಾಸೋಹಗಳನ್ನು ಮಾಡಿ ಬದುಕಬೇಕು. ದುಡಿಯದವನ ಹಂಗಿನ ಬಾಳು ನಾಯಿಗಿಂತಲೂ ಕೀಳು. ಅಂತಹ ಬದುಕು ಶಿವನಿಗೂ ಒಪ್ಪಿತವಾಗದು. ಆದ್ದರಿಂದ ಕಾಯಕ ಮಾಡದೆ ಬೇರೆಯವರು ದುಡಿದದ್ದನ್ನು ತಿಂದು ಬದುಕುವ ಪರಾವಲಂಬಿ ಮನುಷ್ಯರನ್ನು ಕಂಡು ಕೆಂಡಾಮಂಡಲವಾಗುವ ಕಾಳವ್ವೆ ಪರರಿಕ್ಕುವ ಅನ್ನವನ್ನು ಕಾರಿದ ಕೂಳು, ಅಮೇಧ್ಯ, ಸಿಂಗಿ (ವಿಷ), ನರಮಾಂಸ ಎಂಬ ಪದ ಪ್ರಯೋಗಗಳನ್ನು ಬಳಸಿ ಪರಾವಲಂಬಿ ಜೀವನಕ್ಕೆ ಧಿಕ್ಕಾರ ಹಾಕುತ್ತಾಳೆ. ಸ್ವದುಡಿಮೆಯ ಅನ್ನಕ್ಕೆ ಮಿಗಿಲಾದ ಪ್ರಾಶಸ್ತ್ರವನ್ನೀಯುತ್ತಾಳೆ.

ಒಟ್ಟಾರೆ ಕಾಳವ್ವೆ ಒಬ್ಬ ಶ್ರೇಷ್ಠ ವಚನಕಾರ್ತಿಯಾಗಿದ್ದು, ಸ್ಥಾಪಿತ ವ್ಯವಸ್ಥೆಯ ವಿರುದ್ಧ ದಿಟ್ಟತನದಿಂದ ಧ್ವನಿಯೆತ್ತಿದ ಕ್ರಾಂತಿಕಾರಿ ಮಹಿಳೆಯಾಗಿದ್ದಾಳೆ. ಆಕೆಯ ನಂಬಿಕೆಗಳು, ಎತ್ತಿ ಹಿಡಿದ ಕಾಯಕ ದಾಸೋಹಗಳಿಂದ ಕೂಡಿದ ಪರಿಶುದ್ಧ ಜೀವನ ಮೌಲ್ಯಗಳು ಎಲ್ಲ ಕಾಲಕ್ಕೂ ಚಿರ ಸ್ಥಾಯಿಯಾಗಿ ನಿಲ್ಲಬಲ್ಲ ಜೀವನ ಮೌಲ್ಯಗಳಾಗಿವೆ.

**ಕೊನೆಯ ಟಿಪ್ಪಣಿ:**

೧. ವೀರಣ್ಣ ರಾಜೂರ, (ಸಂ), ಶಿವಶರಣೆಯರ ವಚನ ಸಂಪುಟ–೫, ಪುಟ–೨೭೮.
೨. ಅದೇ, ಪುಟ–೨೭೮.
೩. ಅದೇ, ಪುಟ–೨೭೯.
೪. ಅದೇ, ಪುಟ–೨೭೯.
೫. ಅದೇ, ಪುಟ–೨೮೦.
೬. ಅದೇ, ಪುಟ–೨೭೬
೭. ಅದೇ, ಪುಟ–೨೭೭.
೮. ಅದೇ, ಪುಟ–೨೭೬